**ಸಾಕ್ಷಿಯನ್ನು ದಿನಾಂಕ 03-06-2025 ರಂದು ಪುನಃ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು- 6 ಮತ್ತು 7ನೇ ಆರೋಪಿತರ ಪರವಾಗಿ ಶ್ರೀ ಡಿ.ಡಿ.ಸಿ ವಕೀಲರಿಂದಃ**

4. 6ನೇ ಆರೋಪಿ ಮತ್ತು ಆತನ ತಂದೆ ಕುಮಾರೆಗೌಡ ರವರ ವಿರುದ್ಧ ನಾನು ಈ ನ್ಯಾಯಾಲಯದಲ್ಲಿ ವಿಚಾರಣೆಗೊಂಡಿದ್ದ Special case No.92/2022 ರಲ್ಲಿ ಸಾಕ್ಷ್ಯ ನುಡಿದಿರುತ್ತೇನೆ. ಚಾಸಾ-1 ಮತ್ತು ನಿಮ್ಮ ಮನೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿ ಮಧ್ಯ ಒಂದು ಬೇಲಿ ಮಾತ್ರ ಇದೆ ಎಂದು ನುಡಿಯುತ್ತಾರೆ. ನಾನು ಇರುವುದು ಪೈಸಾರಿ ಜಾಗದಲ್ಲಿ ಎಂದರೆ ಸರಿ. ಪ್ರಾಸಾ-4 ರವರಿಗೆ ಸರ್ಕಾರದಿಂದ ಒಂದು ಮನೆ ಮಾತ್ರ ಮಂಜೂರಾಗಿರುತ್ತದೆ.

5. ದಿನಾಂಕ 18-07-2022 ರಂದು ನಾನು ಕೆಲಸಕ್ಕೆ ಹೋಗಿರಲಿಲ್ಲ. ಚಾಸಾ-1 ಮತ್ತು ಪ್ರಾಸಾ-4 ರವರನ್ನು ನಾನು ಅವರ ಮನೆಯಲ್ಲಿ ದಿನಾಂಕ 18-07-2022 ರಂದು ಬೆಳಿಗ್ಗೆ 7.00 ಗಂಟೆಗೆ ನೋಡಿದ್ದೆ. ಚಾಸಾ-1 ಮತ್ತು ಪ್ರಾಸಾ-4 ರವರು ಶನಿವಾರಸಂತೆಯಲ್ಲಿ ಇರುವ ಹೋಟೆಲ್ ಗೆ ಅಥವಾ ಆಸ್ಪತ್ರೆಗೆ ಹೋದದ್ದನ್ನು ನಾನು ನೋಡಿರುವುದಿಲ್ಲ. ನಾನು, ನನ್ನ ಅತ್ತೆ, ಗಂಡ ಮತ್ತು ಮಕ್ಕಳು ಒಟ್ಟಿಗೆ ಒಂದೇ ಮನೆಯಲ್ಲಿ ವಾಸವಿದ್ದೇವೆ. ನನಗೆ ದಿನಾಂಕ 18-07-2022 ರಂದು ಬೆಳಿಗ್ಗೆ 7.00 - 7.30 ಗಂಟೆಗೆ ಕಿರುಚಾಡುವ ಶಬ್ದ ಕೇಳಿಸಿದ್ದು, ನಾನು ಮನೆಯ ಹೊರಗಡೆ ಬಂದು ನೋಡಿದಾಗ ಚಾಸಾ-1 ರವರ ಮನೆಯ ಹೊರಗಡೆ ಜಗಳವಾಗುತಿತ್ತು. ಜಗಳ ಆದ ನಂತರ ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ. ಜಗಳ ಆದ ಎಷ್ಟು ಹೊತ್ತಿನ ನಂತರ ನೀವು ಚಾಸಾ-1 ರವರ ಮನೆಯ ಬಳಿಗೆ ಹೋದಿರೀ ಎಂದರೆ ಸಾಕ್ಷಿ ಜಗಳವಾಗುವಾಗಲೇ ನಾನು ಹೋಗಿದ್ದೆ ಎನ್ನುತ್ತಾರೆ. ಆ ಸಂದರ್ಭದಲ್ಲಿ ಚಾಸಾ-1 ಮತ್ತು ಪ್ರಾಸಾ-4 ರವರು ಮನೆಯ ಹೊರಗಡೆ ಇದ್ದರು. ನಾನು ಹೋದ ನಂತರ ಮನೆಯ ಹೊರಗಡೆ

ಯಾವುದೇ ಗಲಾಟೆ ಆಗಿರಲಿಲ್ಲ. ದಿನಾಂಕ 18-07-2022 ರಂದು ಬೆಳಿಗ್ಗೆ ಕಿರುಚಾಡುವ ಶಬ್ದ ಕೇಳಿಸಿ, ನಾನು ಮನೆಯಿಂದ ಹೊರಗಡೆ ಬಂದಾಗ ನನ್ನ ಜೊತೆ ನನ್ನ ಗಂಡನಾಗಲೀ, ಅತ್ತೆಯಾಗಲೀ ಅಥವಾ ನನ್ನ ಮಕ್ಕಳಾಗಲೀ ಬಂದಿರಲಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದ ನಂತರ ಅಲ್ಲಿಗೆ ಪ್ರಾಸಾ-1 ರವರು ಅಲ್ಲಿಗೆ ಬಂದಿದ್ದರು. ನಾನು ಚಾಸಾ-1 ರವರ ಮನೆಯ ಹೊರಗಡೆ ಬಳಿ ಹೋದ ನಂತರ ಪ್ರಾಸಾ-1 ರವರು ಅಲ್ಲಿಗೆ ಬಂದಿದ್ದು, ತದನಂತರದಲ್ಲಿ ಚಾಸಾ-1 ಅಥವಾ ಪ್ರಾಸಾ-4 ರವರು ಬೇರೆ ಎಲ್ಲಿಗೂ ಹೋದದ್ದನ್ನು ನಾನು ನೋಡಿರುವುದಿಲ್ಲ. ನಾನು ಅಲ್ಲಿ ಅರ್ಧ-ಮುಕ್ಕಾಲುಗಂಟೆಗಳ ಕಾಲ ಇದ್ದೆ. ಪ್ರಾಸಾ-1 ರವರು ಸಹ ನನ್ನ ಒಟ್ಟಿಗೆ ಅರ್ಧ -ಮುಕ್ಕಾಲುಗಂಟೆಗಳ ಕಾಲ ಇದ್ದರು. ನಂತರ ನಾನು ಮನೆಗೆ ಹೋಗಿದ್ದು, ಪ್ರಾಸಾ-1 ರವರು ಎಲ್ಲಿಗೆ ಹೋದರು ಎಂದು ನಾನು ನೋಡಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಪೊಲೀಸರಿಗೆ ಹೇಳಿಕೆಗಳನ್ನು ನೀಡಿದ್ದೆ. ಪೊಲೀಸರು ನನ್ನ ಮನೆಯ ಹತ್ತಿರ ಮತ್ತು ಠಾಣೆಯಲ್ಲಿ ನನ್ನ ಹೇಳಿಕೆಗಳನ್ನು ಪಡೆದಿದ್ದರು. ಸದರಿ ಹೇಳಿಕೆಗಳಲ್ಲಿ ಏನೇಲ್ಲಾ ನಮೂದಿಸಲಾಗಿದೆ ಎಂದು ನಾನು ನೋಡಿರುವುದಿಲ್ಲ. ದಿನಾಂಕ 18-07-2022 ರಂದು ಬೆಳಿಗ್ಗೆ 7.30 ಯಿಂದ 7.45 ಗಂಟೆಯ ಸಮಯದಲ್ಲಿ ಬೊಬ್ಬೆ ಶಬ್ದ ಕೇಳಿಸಿದ್ದ ಸಂದರ್ಭ ನಾನು ಹೋಗಿ ನೋಡಲಾಗಿ ಚಾಸಾ-1 ಹಾಗೂ ಪ್ರಾಸಾ-4 ರವರು ಮನೆಯ ಹೊರಗೆ ಇದ್ದರು ಎನ್ನುವ ಹೇಳಿಕೆಯನ್ನು ನೀಡಿರುವುದಿಲ್ಲ ಬದಲಾಗಿ ಮನೆಯ ಒಳಗೆ ಇದ್ದರು ಎಂದು ಹೇಳಿರುತ್ತೇನೆ. 1 ನೇ ಆರೋಪಿ ಪ್ರಾಸಾ-4 ರವರ ಕಿಸೆಯಿಂದ ಏನನ್ನೋ ತೆಗೆದುಕೊಂಡು ಹೋದರು ಎಂಬ ಸಂದರ್ಭದಲ್ಲಿ ನಾನು 5 ಅಡಿ ಅಂತರದಲ್ಲಿ ಇದ್ದೆ. ಆಗ ಪ್ರಾಸಾ-4 ರವರ ಕಿಸೆ ಹರಿದು ಹೋಗಿತ್ತೋ, ಇಲ್ಲವೋ ಎಂಬ ಬಗ್ಗೆ ನಾನು ಗಮನಿಸಿರಲಿಲ್ಲ. ಪ್ರಾಸಾ-4 ರವರ ಮನೆಯಿಂದ ಎಷ್ಟು ಅಡಿ ದೂರದಲ್ಲಿ ಪ್ರಾಸಾ-5 ರವರು ವಾಸ ಮಾಡುತಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ದಿನ ಪ್ರಾಸಾ-5

ರವರು ಪ್ರಾಸಾ-4 ರವರ ಮನೆಯ ಬಳಿ ಬಂದದ್ದನ್ನು ನಾನು ನೋಡಿರುವುದಿಲ್ಲ. ಘಟನೆ ನಡೆದ ಮಾರನೇಯ ದಿನ ದೂರು ಕೊಟ್ಟಿರುವ ವಿಷಯವನ್ನು ಚಾಸಾ-1 ಮತ್ತು ಪ್ರಾಸಾ-4 ರವರು ನನ್ನ ಬಳಿ ಹೇಳಿದ್ದರು. ನಾನು ನೋಡಿದಾಗ ಮುದ್ದೆಮಾಲು-1 11/23 ಚದರ ಅಡಿ ವಿಸ್ತೀರ್ಣದ ಹಾಲಿನ ಗೋಡೆಯ ಉತ್ತರ ದಿಕ್ಕಿನಲ್ಲಿ ಇತ್ತು. ಸದರಿ ಹಾಲ್ ನಲ್ಲಿ ಮುದ್ದೆಮಾಲು-1 ಇದ್ದ ಜಾಗದಲ್ಲಿ ಚಾಸಾ-1 ರವರು ಉಪಯೋಗಿಸುತಿದ್ದ ಪಾತ್ರೆ ಮತ್ತು ದಿನಸಿ ಸಾಮಾನುಗಳು ಇದ್ದವು.

6. ದಿನಾಂಕ 18-07-2022 ರಂದು ಚಾಸಾ-1 ಮತ್ತು ಪ್ರಾಸಾ-4 ರವರು, ಪ್ರಾಸಾ-4 ರವರ ತಮ್ಮನ ಮನೆಗೆ ಹೋಗಿದ್ದರು ಎಂದರೆ ಸಾಕ್ಷಿ ಸದರಿ ದಿನ ಬೆಳಿಗ್ಗೆ 7.30 ಗಂಟೆಗೆ ಅವರುಗಳು ಘಟನೆ ನಡೆದ ಮನೆಯಲ್ಲಿ ಇದ್ದರು ಎನ್ನುತ್ತಾರೆ. ದಿನಾಂಕ 18-07-2022 ರಂದು ಚಾಸಾ-1 ರವರು ಸದರಿ ಮನೆಯಲ್ಲಿ ಇಲ್ಲದ ಕಾರಣ ನಾನು ಹೇಳಿದಂತಹ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ-1 ಮತ್ತು ಪ್ರಾಸಾ-4 ರವರು ನೇರವರೆಯವರಾದ ಕಾರಣ ಅವರು ಸೃಷ್ಟಿ ಮಾಡಿದ ಕೇಸಿನಲ್ಲಿ ನನ್ನನ್ನು ಸಾಕ್ಷಿದಾರಳನ್ನಾಗಿ ಬಳಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರು ಪ್ರಾಸಾ-4 ರವರು ಹೇಳಿಕೊಟ್ಟಂತೆ ಆರೋಪಿಗಳ ವಿರುದ್ದ ನಾನು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪ್ರಾಸಾ-4 ರವರು ಹೇಳಿಕೊಟ್ಟ ಪ್ರಕಾರ ಮುದ್ದೆಮಲು-1 ನ್ನು ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ-1 ಕ್ಕೂ, ಈ ಕೇಸಿಗೂ, ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲು- 1 ರಿಂದ 4ನೇ ಆರೋಪಿತರ ಪರ ವಕೀಲರು ಮತ್ತು 5ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ